MVC.No. 62/2023 PW-2

**ದಿನಾಂಕ 05.03.2026 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಅರ್ಜಿದಾರರ ಪರ ಶ್ರೀ ಎಂ ಕೆ ಎನ್ ವಕೀಲರಿಂದಃ**

ಸಾಕ್ಷಿ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತದೆ. ಅದನ್ನು ನನ್ನ ಸಾಕ್ಷ್ಯಾವೆಂದು ಪರಿಗಣಿಸಲು ಕೋರಿಕೊಳ್ಳುತ್ತೇನೆ. ಅರ್ಜಿಗೆ ಸಂಬಂದಪಟ್ಟಂತೆ ಇತ್ತೀಚಿನ 4 ಕ್ಷಕಿರಣಗಳನ್ನು ಒಟ್ಟಾರೆಯಾಗಿ ನಿಪಿ-9 ಎಂದು, 2 ಒಳ ರೋಗಿ ದಾಖಲಾತಿಯನ್ನು ನಿಪಿ-10 ಎಂದು, ಅಂಗ ನ್ಯೂನ್ಯತಾ ಪ್ರಮಾಣ ಪತ್ರವನ್ನು ನಿಪಿ-11 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಎದುರುದಾರರಾದ ಆರ್ 2 ಪರ ಶ್ರೀ ಟಿ ವಿ ಆರ್ ವಕೀಲರಿಂದಃ**

ಅರ್ಜಿದಾರರು ನನ್ನ ಬಳಿ ಬರುವ ಮೊದಲು ಚನ್ನಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ. ಈ ಬಗ್ಗೆ ನನಗೆ ಮಾಹಿತಿ ಕೊಟ್ಟಿಲ್ಲ. ಅಪಘಾತವಾದ ದಿನವೇ ಅರ್ಜಿದಾರರು ನಮ್ಮ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿರುತ್ತಾರೆ. ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿಲ್ಲ. ಅರ್ಜಿದಾರರಿಗೆ 5 ಗಾಯಗಳು ಆಗಿದ್ದವು. ಸದರಿ ಗಾಯಗಳು ಸಂಪೂರ್ಣ ಗುಣ ಮುಖವಾಗಿಲ್ಲ. ಅರ್ಜಿದಾರರಿಗೆ ಶಸ್ತ್ರ ಚಿಕಿತ್ಸೆಯಾಗಿದೆ. ಅರ್ಜಿದಾರರಿಗೆ ಕ್ಷಕಿರಣಗಳನ್ನು ತೆಗೆದಿದ್ದೇವೆ. ಅರ್ಜಿದಾರರು ನಮ್ಮ ಆಸ್ಪತ್ರೆಯಲ್ಲಿ 1 ವಾರ ಇದ್ದರು. ಅರ್ಜಿದಾರರು ಬಿಡುಗಡೆಯಾದ ನಂತರ ಹಲವಾರು ಬಾರಿ ನಮ್ಮ ಆಸ್ಪತ್ರೆಗೆ ಬಂದಿರುತ್ತಾರೆ. ಇತ್ತೀಚೆಗೆ ನಮ್ಮ ಆಸ್ಪತ್ರೆ ಕಡೇ ವರ್ಷ ಅಕ್ಟೋಬರ್ ತಿಂಗಳಲ್ಲಿ ಬಂದಿರುತ್ತಾರೆ. ದಿಃ13.10.2025 ರಿಂದ ಅರ್ಜಿದಾರರು ನಮ್ಮ ಆಸ್ಪತ್ರೆಗೆ ಬಂದಿಲ್ಲ ಎಂದರೆ ನಿಜ. ಅರ್ಜಿದಾರರಿಗೆ ಬಹುತೇಕ ಮೂಳೆ ಮುರಿತ ಕೂಡಿಕೊಂಡಿದೆ. ಅರ್ಜಿದಾರರಿಗೆ 35 ವರ್ಷ ವಯಸ್ಸಾಗಿದೆ. ಅರ್ಜಿದಾರರಿಗೆ ಕಡಿಮೆ ವಯಸ್ಸಾಗಿದ್ದರಿಂದ ಗಾಯಗಳು ವಾಸಿಯಾಗುವ ಸಾಧ್ಯತೆ ಜಾಸ್ತಿ ಇದೆ ಎಂದರೆ ಸುಳ್ಳು. ಒಳಅಳವಡಿಕೆಯನ್ನು ತೆಗೆಯಲು ಅಂದಾಜು ವೆಚ್ಚ ನೀಡಿಲ್ಲ. ಸರ್ಕಾರಿ ಆಸ್ಪತ್ರೆಯಲ್ಲಿ ಒಳಅಳವಡಿಕೆಯನ್ನು ಉಚಿತವಾಗಿ ತೆಗೆಯುತ್ತಾರೆಂದರೆ ನಿಜ. ಒಳಅಳವಡಿಕೆಯನ್ನು ತೆಗೆದ ನಂತರ ನ್ಯೂನ್ಯತೆವ ಕಡಿಮೆಯಾಗುತ್ತದೆ ಎಂದರೆ ಸುಳ್ಳು.ಒಳಅಳವಡಿಕೆಯನ್ನು ತೆಗೆಯಲು 50 ಸಾವಿರ ಆಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸುಳ್ಳು. ಅರ್ಜಿದಾರರಿಗೆ ಈಗ ಕೆಲಸ ಮಾಡಲು ತೊಂದರೆ ಇಲ್ಲ ಎಂದರೆ ಸುಳ್ಳು. ನಾನು ಅರ್ಜಿದಾರರಿಗೆ ಹೆಚ್ಚಿನ ಪರಿಹಾರ ಬರಲೀ ಎಂದು ಹೆಚ್ಚಿನ ಅಂಗ ನ್ಯೂನ್ಯತೆಯನ್ನು ತೋರಿಸಿದ್ದೇನೆಂದರೆ ಸುಳ್ಳು.

ಅರ್ಜಿದಾರರಿಗೆ  ನಾನು ಹೇಳಿದಂತೆ ಅಷ್ಟು ನ್ಯೂನ್ಯತೆ ಬರುವುದಿಲ್ಲ ಎಂದರೆ ಸುಳ್ಳು. ಅರ್ಜಿದಾರರಿಗೆ ಶೇಕಡಾ 20 ರಷ್ಟು ಅಂಗ ನ್ಯೂನ್ಯತೆ ಬರುವುದಿಲ್ಲ ಎಂದರೆ ಸುಳ್ಳು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

**ಓ ಹೇ ಕೇ ಸ ಒ**

**(ವೆಂಕಟೇಶಪ್ಪ. ವಿ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**